ಪತಿಯ ಪಾದಕ್ಕೆರಗಿ ಮತಿ ಬೇಡಿ ಪಾರ್ವತಿ । ಸುತಗೆ ವಂದನೆಯ ಮಾಡಿದಳು ॥
ಅತಿ ಭಕ್ತಿಯಿಂದಲಿ ಸ್ತುತಿಸುವ ಜನರಿಗೆ ಸ- । ದ್ಗತಿಯಾಗಲೆನುತ ಪೇಳಿದಳು ॥ ೧ ॥

ಸುಧಾಮನೆಂಬೋರ್ವ ಸೂಕ್ಷ್ಮದ ಬ್ರಾಹ್ಮಣ । ಹೊದಿಯಲಿಕ್ಕಿಲ್ಲ ಆಶನವಿಲ್ಲ ॥
ಗದಗದ ನಡುಗುತ ಮಧುರ ಮಾತಾಡುತ । ಸದನದೊಳಿರುತಿದ್ದನಾಗ ॥ ೨ ॥

ಪ್ರಾತಃ ಕಾಲದಲ್ಲೆದ್ದು ನಿತ್ಯ ಕರ್ಮವ ಮುಗಿಸಿ । ನಾಥನ ಧ್ಯಾನ ಮಾಡುತಲಿ ॥
ಪಾತ್ರರ ಮನೆಗ್ಹೋಗಿ ಯಾಚನೆಗಳ ಮಾಡಿ । ಗ್ರಾಸ ತರುವನು ಮುಷ್ಟಿ ತುಂಬ ॥ ೩ ॥

ಪತಿವೃತೆ ಹೆಂಡತಿ ಪತಿ ತಂದದ್ದೆ ಸಾಕೆಂದು । ಹಿತದಿಂದ ಪಾಕ ಮಾಡುವಳು ॥
ಅತಿ ಭಕ್ತಿಯಿಂದಲಿ ಪತಿಗೆ ಭೋಜನ ಬಡಿಸಿ । ಮತಿವಂತಿ ಉಳಿದದ್ದುಂಬುವಳು ॥ ೪ ॥

ಹಸಿವೆ ತೃಷೆಗಳಿಂದ ಅತಿಕ್ಲೇಶವಾಗಿದ್ದು । ಪತಿಕೂಡೆ ಮಾತನಾಡಿದಳು ॥
ಗತಿಯೇನು ನಮಗಿನ್ನು ಹಿತದವರ್ಯಾರಿಲ್ಲ ಸ- । ದ್ಗತಿಯೇನೆನುತ ಪೇಳಿದಳು ॥ ೫ ॥

ಪೊಡವಿಯೊಳಗೆ ನಿಮ್ಮ ಒಡಹುಟ್ಟಿದವರಿಲ್ಲೆ । ಒಡನೆ ಆಡಿದ ಗೆಳೆಯರಿಲ್ಲೆ ॥
ಕರೆದು ಕೂಡಿಸಿಕೊಂಡು ಬಿರುಸು ಮಾತ್ಹೇಳುವ । ಹಿರಿಯರು ದಾರಿಲ್ಲೆ ನಿಮಗೆ ॥ ೬ ॥

ಚಿಕ್ಕಂದಿಲ್ಲೋದಿಲ್ಲೆ ಹೆತ್ತವರ್ಹೇಳಿಲ್ಲೆ । ಉತ್ತಮ ಗುರುಗೋಳಿಲ್ಲೇನು ॥
ಹೊತ್ತು ವೇಳೆಗಾಗೋ ಮಿತ್ರರು ಯಾರಿಲ್ಲೆ ಮತ್ತೆ ಕೇಳಿದಳು ಕ್ಲೇಶದಲಿ ॥ ೭ ॥

ಮಡದಿ ಮಾತನು ಕೇಳಿ ಮನದಲಿ ಯೋಚಿಸಿ । ಹುಡುಗನಾಗಿರಲಿಕ್ಕೆ ಹೋಗಿ ॥
ಗುರುಕುಲ ವಾಸದಲಿ ಹರಿ ನಾವು ಓದಿದ್ದು । ಹರಿ ಹೊರ್ತು ಮತ್ತ್ಯೊಬ್ಬರಿಲ್ಲಾ ॥ ೮ ॥

ಇನ್ನೊಬ್ಬರೇತಕೆ ಅನ್ಯರಪೇಕ್ಷೇಕೆ । ಮನ್ನಿಸಿ ಹೋಗಿ ಬರ್ರೆಂದಳು ॥
ಇನ್ನೇನು ಕೊಡತಿಯೆ ಹರಿ ಮುಂದೆ ಇಡಲಿಕ್ಕೆ । ಚೆನ್ನಾಗಿ ಕೇಳಿದನಾಗ ॥ ೯ ॥

ಗಾಬರಿಯಾದಳು ಸಾಗಿ ತಾ ನಡೆದಳು । ಬೇಗ ತಂದಳು ಅವಲಕ್ಕಿ ॥
ಬಾಗಿ ವಸ್ತ್ರದೊಳು ಬೇಗ ಕಟ್ಟಿಕೊಟ್ಟು । ಹೋಗಿ ಬರ್ರೆನುತ ಪೇಳಿದಳು ॥ ೧೦ ॥

ಅಂಗಳವನು ಬಿಟ್ಟು ಮುಂದಕೆ ಬಂದನು । ಹಂಗ ಹಾರುವುದು ಎಡಕೆ ॥
ಮಂಗಳವಾಗುವುದು ರಂಗನ ದರುಶನ । ಸಂದೇಹವಿಲ್ಲದಾಗುವುದು ॥ ೧೧ ॥

ಬಾಗಿಲವನು ಬಿಟ್ಟು ಸಾಗಿ ಮುಂದಕೆ ಬರಲು । ಕಾಗಿ ಹಾರ್ಹೋದವು ಬಲಕೆ ॥
ಆಗುವುದು ನಮಗಿನ್ನು ಆಗುವುದು ಶುಭ ಚಿನ್ಹ । ಆಗುವುದು ಹರಿ ಕೃಪೆಯಿಂದ ॥ ೧೨ ॥

ಹೀಗೆಂದ ಬ್ರಾಹ್ಮಣ ಮುಂದಕೆ ನಡೆದನು । ಕಂಡನು ಕಮಲ ಪುಷ್ಪಗಳ ॥
ರಂಗನ ಹೆಂಡರಿಗೆ ಹೆರಳಿಗೆ ಬೇಕೆಂದು । ತೆಗೆದುಕೊಂಡನು ಕಮಲ ಪುಷ್ಪಗಳ ॥ ೧೩ ॥

ಹರಿಯುವ ಜಲವೆಲ್ಲ ಹರಿಯಭಿಷೇಕವೆಂ- । ದ್ಹರುಷದಲಿ ತುಂಬಿಕೊಂಡು ॥
ಕರದಲ್ಲಿ ಹಿಡಕೊಂಡು ಪುರದ ಬಾಗಿಲ ಮುಂದೆ । ಹರಿ ಹ್ಯಾಗೆ ದೊರಕುವ ನೆಂದ ॥೧೪ ॥

ನಿಂತನು ಬ್ರಾಹ್ಮಣನ ಅನಂತ ರೂಪದಿ ಧ್ಯಾನ । ಅಂತ ರಂಗದಲಿ ಮಾಡುತಲಿ ॥
ಸಂತೋಷದಿಂದಲಿ ಧರಿಸಿದ ದಶರೂಪ- ।ದಿಂದ ಬಂದೆನ್ನ ಕಾಯೆಂದ ॥ ೧೫ ॥

ಹರಕು ವಸ್ತ್ರವನುಟ್ಟು ಹರಿ ಧ್ಯಾನ ಮಾಡುವ । ವಿಪ್ರನ ಕಂಡು ಚಾರಕರು ॥
ಬರಬೇಡಿರೊಳಗೆ ಹಿರಿಯರಪ್ಪಣೆಯಿಲ್ಲ । ತಿರುಗಿ ಹೋಗೆನುತ ಹೇಳಿದರು ॥ ೧೬ ॥

ಅಂದ ಮಾತನು ಕೇಳಿ ಅಂಜಿದ ಬ್ರಾಹ್ಮಣ । ಇಂದಿರಾರಮಣಗ್ಹೇಳೆಂದ ॥
ಹೆಸರು ಸುಧಾಮನಂತೆ ಹಸಿದು ಬಂದಾರೆಂದು । ವಸುದೇವ ತನಯಗ್ಹೇಳಿದರು ॥ ೧೭ ॥

ಕೇಳಿದ ಹರಿಯೆದ್ದು ಬಹಳ ಹರುಷದಿಂದ । ಬೇಗನೆ ಕರೆತನ್ನಿರವನ ॥
ಹೋಗು ಹೋಗೆಂದರೆ ಸಾಗಿ ಮುಂದಕೆ ಬರಲು । ಬಾಗಿಲಿಗೆ ಬಂದ ಸುಧಾಮ ॥ ೧೮ ॥

ಬಂದ ಭಕ್ತನ ನೋಡಿ ಆನಂದದಿಂದೆದ್ದು । ವಂದಿಸಿ ಆಸನವ ಹಾಕಿದರು ॥
ಚಂದದಿಂದಲಿ ಕರವ ಹಿಡಿದು ಮಾತಾಡುತ । ಬಂದ ಕಾರಣವ ಕೇಳಿದರು ॥ ೧೯ ॥

ಮಂದಗಮನೆ ಸಹಿತ ತಂದ ಉದಕದಿಂದ । ಚಂದದಿಂದಲಿ ಪಾದ ತೊಳೆದು ॥
ಗಂಧ ಕೇಶರ ಹಚ್ಚಿ ಚೆಂದ ಚಾಮರದಿಂದ । ಅಂದದಿ ಗಾಳಿ ಬೀಸಿದರು ॥ ೨೦ ॥

ಹಸಿದು ಬಂದಾರೆಂದು ಹಸಿವೆಗೆ ತಕ್ಕಂಥ । ಹಸನಾದ ಹಣ್ಣು ಸಕ್ಕರೆಯು ॥
ಕುಸುಮ ನಾಭನು ತಾನು ಪನ್ನೀರು ತಂದೀಡೆ । ಉಂಡು ಕೈತೊಳೆದ ಸುಧಾಮ ॥ ೨೧ ॥

ಮಂದರಧರಗಿನ್ನು ಸುಂದರ ಸತಿಯರು । ತಂದರು ತಬಕ ವಿಳ್ಯವನು ॥
ಇಂದಿರೆರಮಣನು ಬಂದ ಸುಧಾಮನು । ಚಂದದಿ ಮೆಲೆದರು ವಿಳ್ಯವನು ॥ ೨೨ ॥

ಶ್ರಮ ಬಹಳವಾಗಿದೆ ಶ್ರಮಿಸಿಕೊಳ್ಳಿರೆಂದು । ಸೆಳೆ ಮಂಚ ತಂದ್ಹಾಕಿದರು ॥
ಶಾಲು ಸಕಲಾತಿಯು ಮೇಲಾದ ಹಾಸಿಗೆ । ಮೇಲೆ ಮಲಗಿದನು ಸುಧಾಮ ॥ ೨೩ ॥

ಅಂದಿನ ರಾತ್ರಿಯಲಿ ಮಂದಗಮನೇಯರ ಬಿಟ್ಟು । ಬಂದು ಮಲಗಿದನು ಶ್ರೀಹರಿಯು ॥
ಹಿಂದಿನ ವೃತ್ತಾಂತ ಒಂದೊಂದು ಸ್ಮರಿಸುತ । ಆನಂದದಿ ಹರಿಯು ಸುಧಾಮ ॥ ೨೪ ॥

ಅಂದಿನ ಸ್ನೇಹವು ಇಂದೇಕೆ ನೆನಪಾಯ್ತು । ಬಂದೀರಿ ಬಹುದಿನಕೆಂದ ॥
ಹೆಂಡತಿ ಮಕ್ಕಳು ಇಹರೇನು ನಿಮಗೆಂದು । ಇಂದಿರೆ ರಮಣ ಕೇಳಿದನು ॥ ೨೫ ॥

ಹೆಂಡತಿ ಕಳುಹಿದಳು ರಂಗನ ದರುಷನ । ಕೊಂಡು ಬಾರೆನುತ ಪೇಳಿದಳು ॥
ತಂದದ್ದು ಕೊಡಲಿಕ್ಕೆ ಸಂದೇಹವೇತಕ್ಕೆ । ತಂಡುಲ ಹಿಡಿದು ಜಗ್ಗಿದನು ॥ ೨೬ ॥

ಮುಷ್ಟಿತುಂಬವಲಕ್ಕಿ ಮುಕ್ಕಿದ ಹರಿ ಬೇಗ । ನಕ್ಕರು ಸತಿಯರೆಲ್ಲ ॥
ಇಷ್ಟೇ ಸಾಕು ಎಂದು ಗಟ್ಯಾಗಿ ಕೈ ಹಿಡಿಯೆ । ಕೊಟ್ಟನು ಭಕ್ತನಿಗೆ ಐಶ್ವರ್ಯ ॥ ೨೭ ॥

ಹದಿನಾರು ಸಾವಿರ ಚದುರೆಯರ ಕರೆಸಿದ । ಕೊಡಿಸಿದೆಲ್ಲರಿಗೆ ತಂಡುಲವ ॥
ಉಳಿಸಿದ ಅವಲಕ್ಕಿ ಉಣಲಿಕ್ಕೆ ಮಾರ್ಗಕ್ಕೆ । ಬೇಕೆಂದು ಬಿಗಿದು ಕಟ್ಟಿದರು ॥ ೨೮ ॥

ರನ್ನದ ಬಾಗಿಲಿಗೆ ಚಿನ್ನದ ಚೌಕಟ್ಟು । ಹೊನ್ನ ಹೊಸ್ತಲವ ನಿರ್ಮಿಸಿದ ॥
ರನ್ನ ಮಾಣಿಕ ಬಿಗಿದ ತೊಲಿ ಕಂಬ ಗಿಳಿಬೋದು । ಪನ್ನಗಶಯನ ನಿರ್ಮಿಸಿದ ॥ ೨೯ ॥

ಇರಿರಿ ನಾಲ್ಕುದಿವಸ ತ್ವರೆ ಯಾಕೆ ಮಾಡುವಿರಿ । ಇರಲಿಕ್ಕೆ ಬಾರದೆಯೆಂದಾ ॥
ನೆರೆ ಹೊರೆ ಯಾರಿಲ್ಲ ತರುಣಿಯೊಬ್ಬಳಿಹಳು । ಇರಲಿ ನಾ ಹೇಗೆ ಪೇಳೆಂದ ॥ ೩೦ ॥

ಪಾದಕೆ ಎರಗಿ ತಾ ಸಾಗಿ ಮುಂದಕೆ ಬಂದ । ಬಾಗಿಲಿಗೆ ಬಂದ ಸುಧಾಮ ॥
ಹೋಗಿರಿ ಹಿಂದಕೆ ಹೋಗಿ ಬರುತೇನೆನಲು । ಬಾಗಿ ಕೈ ಮುಗಿದ ಶ್ರೀಹರಿಯು ॥ ೩೧ ॥

ಮುಂದಕೆ ಬಂದನು ಇಂದೇನು ಕೊಡಲಿಲ್ಲ । ಹೆಂಡತಿಗೆ ಹೇಳಲೇನೆಂದ ॥

ನಿಂತನು ಒಣಿಯಲಿ ಮಂದಿರ ಸಿಗಲಿಲ್ಲ । ಹೆಂಡತಿಯ ಕಂಡ ಸುಧಾಮ ॥ ೩೨ ॥

ಮಂದಿರವನ್ನೆಲ್ಲ ಕಂಡನು ಐಶ್ವರ್ಯ । ಚಂದದಿಂದಾಭರಣ ಕಂಡ ॥
ಇಂದಿರಾಪತಿಯನ್ನು ಕಂಡು ಬಂದುದರಿಂದ । ಬಂದಿತು ಸಕಲ ಸಂಪತ್ತು ॥ ೩೩ ॥

ರವಿವಾರ ಹಾಡಿದರೆ ರಾಜಕಾರ್ಯವಾಗುವುದು । ಬಂಜೆಗೆ ಮಕ್ಕಳಾಗುವವು ॥
ಬರಡೆಮ್ಮೆ ಕರೆಯೋದು ಬಡತನ ಹಿಂಗುವುದು । ಗುರುವಾರ ಹಾಡಿದವರಿಗೆ ॥ ೩೪ ॥

ಶ್ರೀನಿವಾಸನ ಧ್ಯಾನ ಮೌನದಿಂದಲಿ ಮಾಡಿ । ನಾನಾ ಸಂಪತ್ತು ಪಡೆದರು ॥
ಅದರ ವಿಷಯ ತಿಳಿದು ಗತಿ ಮೋಕ್ಷ ಇರಲೆಂದು । ಶ್ರೀ ಹರಿ ಕೊಡು ದೇವ ಸಿರಿಯ ॥೩೫ ॥

ಇದು ಭಾಗವತವೆನ್ನಿ ಇದು ಭಾಗವತವೆನ್ನಿ । ಇದು ಭಾಗವತಕೆ ಕೀಲಗಳು ।
ಇದಕೆ ಪ್ರಿಯನು ನಮ್ಮ ಪುರಂದರವಿಠ್ಠಲ । ಇದರಿಂದ ಮುಕ್ತಿ ಕೊಡುವನು ॥ ೩೬ ॥